## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 705 (784) |
| ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸುವ ದಿನಾಂಕ | 13.03.2025 |

<table>
<tr><th>ಕ್ರ ಸಂ</th><th>ಕೋರಿದ ಮಾಹಿತಿ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮೈಕ್ರೋ ಪೈನಾನ್ಸ್ ಕಂಪನಿಗಳು ಸಾಲ ವಸೂಲಾತಿ ಮಾಡಲು ಸಾರ್ವಜನಿಕರಿಗೆ ಬಹಳ ಕಿರುಕುಳ ನೀಡುತ್ತಿದ್ದು, ಇದರಿಂದ ಸಾಲ ಪಡೆದ ಹಲವಾರು ಮೈಕ್ರೋ ಪೈನಾನ್ಸ್ ಕಂಪನಿಗಳ ಕಿರುಕುಳ ತಾಳಲಾರದೆ ಆತ್ಮಹತ್ಯಗಳಿಗೆ ಶರಣಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಮೈಕ್ರೋ ಪೈನಾನ್ಸ್ ಕಂಪನಿಗಳು ಸಾಲ ವಸೂಲಾತಿ ಮಾಡಲು ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿದ್ದು, ಇದರಿಂದ ಆತ್ಮಹತ್ಯೆಗೆ ಶರಣಾಗಿರುವ ಹಲವು ಪ್ರಕರಣಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ</td><td>ಬಂದಿದ್ದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳ ತಾಳಲಾರದೆ ಆತ್ಮಹತ್ಯೆಗೆ ಒಳಗಾದ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿದೆ ಈ ಪ್ರಕರಣಗಳಲ್ಲಿ ಮೈಕ್ರೋ ಪೈನಾನ್ಸ್ ಕಂಪನಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)</td><td>ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳ ತಾಳಲಾರದೆ ಆತ್ಮಹತ್ಯೆಗೆ ಒಳಗಾದ ಪ್ರಕರಣಗಳ ಅಂಕಿ-ಅಂಶ ಈ ಕೆಳಗಿನಂತಿದೆ:<br><br><table><tr><th>ಕ್ರ. ಸಂ</th><th>ವರ್ಷ</th><th>ಆತ್ಮಹತ್ಯೆಗೆ ಒಳಗಾದ ಪ್ರಕರಣಗಳ ಸಂಖ್ಯೆ:</th></tr><tr><td>1</td><td>2023</td><td>5</td></tr><tr><td>2</td><td>2024</td><td>7</td></tr><tr><td>3</td><td>2025</td><td>15</td></tr><tr><td colspan="2">ಒಟ್ಟು</td><td>27</td></tr></table><br>ಜಿಲ್ಲಾವಾರು ಪ್ರಕರಣಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಹೊಸದಾಗಿ ಹೊರಡಿಸಲಾದ ಕಾಯ್ದೆಯ ಪ್ರಕಾರ ಪ್ರಕರಣಗಳನ್ನು ದಾಖಲು ಮಾಡಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತದೆ.<br><br>• ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿಯಿಂದಾಗಿ ಸಾರ್ವಜನಿಕರಿಗೆ ತೊಂದರೆಗಳು ಉಂಟಾದಲ್ಲಿ, ಕೂಡಲೇ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹೋಗಿ, ನಿರ್ಭೀತಿಯಿಂದ ದೂರು ಕೊಡಲು ಸೂಕ್ತ ಜಾಗೃತಿ ಮೂಡಿಸಲಾಗುತ್ತಿದೆ.<br><br>• ಕಾಲಕಾಲಕ್ಕೆ ಬೀಟ್ ಮೀಟಿಂಗ್ ಮತ್ತು ಸಾರ್ವಜನಿಕರ ಕುಂದು ಕೊರತೆ ಸಭೆ, ಮೈಕ್ರೋ ಫೈನಾನ್ಸ್ ಕಂಪನಿಗಳು ಕಿರುಕುಳ ನೀಡುತ್ತಿರುವ ಬಗ್ಗೆ ಮಾಹಿತಿ ಬಂದಲ್ಲಿ, ಅಂತಹ ಕಂಪನಿಗಳ ವಿರುದ್ಧ ನಿಯಮಾನುಸಾರ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಲಾಗುವುದು.</td></tr>
</table>

| | | |
|---|---|---|
| | | • ಕಿರುಕುಳ ನೀಡದಂತೆ ಠಾಣಾವಾರು, ಉಪ ವಿಭಾಗವಾರು, ವೃತ್ತವಾರು ಮೈಕ್ರೋ ಫೈನಾನ್ಸ್ ಕಂಪನಿಗಳ ಮುಖ್ಯಸ್ಥರ ಸಭೆಗಳನ್ನು ಕೈಗೊಂಡು ಬ್ಯಾಂಕಿನ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತಮ್ಮ ಯಾವುದೇ ವ್ಯವಹರಣೆಗಳನ್ನು ಆರ್.ಬಿ.ಐ. ಮಾರ್ಗ ಸೂಚಿಗಳನ್ವಯ ಕೈಗೊಳ್ಳಬೇಕೆಂದು ಮತ್ತು ನ್ಯಾಯಾಲಯಗಳ ಮೂಲಕ ಬಗೆ ಹರಿಸಿಕೊಳ್ಳಲು ಹಾಗೂ ಸಾರ್ವಜನಿಕರಿಗೆ ಅನಾವಶ್ಯಕ ತೊಂದರೆ ನೀಡದಂತೆ ಎಚ್ಚರಿಕೆ ನೀಡಲಾಗುತ್ತಿದೆ.<br>• ಮೈಕ್ರೋ ಫೈನಾನ್ಸ್ ಗಳ ಹಣವನ್ನು ಸಾಲವಾಗಿ ನೀಡುವ ಮೊದಲು ಸಾಲಕ್ಕಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಬೇರೆ ಬೇರೆ ಸಂಘಗಳಲ್ಲಿ ಸಾಲವನ್ನು ಪಡೆದುಕೊಂಡಿರುವ ಬಗ್ಗೆ ಪರಿಶೀಲನೆ ನಡೆಸಿ ನಂತರ ಸಾಲವನ್ನು ನೀಡುವುದು.<br>• ಮೈಕ್ರೋ ಫೈನಾನ್ಸ್ ರವರು ಸುರಕ್ಷತಾ ಕ್ರಮಗಳನ್ನು ಅನುಸರಿಸದೆ ಸಾರ್ವಜನಿಕರಿಗೆ ತೊಂದರೆಯಾದಲ್ಲಿ ಅಂತಹ ಮೈಕ್ರೋ ಫೈನಾನ್ಸ್ ರವರ ವಿರುದ್ಧ ಸೂಕ್ತ ಕಾನೂನು ರೀತಿ ಕ್ರಮ ಜರುಗಿಸಲಾಗುವುದು.<br>• ಮೈಕ್ರೋ ಫೈನಾನ್ಸ್ ಸಂಸ್ಥೆಗಳು ನೋಂದಣಿ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಳ್ಳಬೇಕು. ನೋಂದಣಿ ಪಡೆಯದೆ ಯಾವುದೇ ಸಾಲವನ್ನು ಮಂಜೂರು ಮಾಡುವಂತಿಲ್ಲ.<br>• ಸಾಲ ನೀಡುವ ಸಂಸ್ಥೆಗಳು ನಿಯಮ ಬಾಹಿರವಾಗಿ ನಡೆದುಕೊಂಡರೆ ಅಂತಹ ಸಂಸ್ಥೆಗಳನ್ನು ರದ್ದುಗೊಳಿಸಬಹುದು. |
| ಇ | ಮೈಕ್ರೋ ಪೈನಾನ್ಸ್ ಕಂಪನಿಗಳು ಸಾಲ ವಸೂಲಾತಿ ಮಾಡಲು ನ್ಯಾಯಯುತ ಮಾರ್ಗಗಳನ್ನು ಅನುಸರಿಸಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು? (ಸಂಪೂರ್ಣ ವಿವರ ನೀಡುವುದು) | ಮೈಕ್ರೋ ಪೈನಾನ್ಸ್ ಕಂಪನಿಗಳು ಸಾಲ ವಸೂಲಾತಿ ಮಾಡಲು ನ್ಯಾಯಯುತ ಮಾರ್ಗಗಳನ್ನು ಅನುಸರಿಸಲು ಸರ್ಕಾರ "ಕರ್ನಾಟಕ ಕಿರು (Micro) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಅಧ್ಯಾದೇಶ, 2025" ಅನ್ನು ದಿನಾಂಕ: 12.02.2025 ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. |

ಸಂಖ್ಯೆ: ಎಫ್‌ಡಿ-ಸಿಎಂ/31/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ

### ಅನುಬಂಧ

| ಕ್ರ.ಸ | ಘಟಕ | ಆತ್ಮಹತ್ಯೆ | | |
|---|---|---|---|---|
| | | 2023 | 2024 | 2025 |
| 1. | ಬೆಂಗಳೂರು ನಗರ | 0 | 0 | 1 |
| 2. | ಮೈಸೂರು ನಗರ | 0 | 0 | 0 |
| 3. | ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 |
| 4. | ಮಂಗಳೂರು ನಗರ | 0 | 0 | 0 |
| 5. | ಬೆಳಗಾವಿ ನಗರ | 0 | 0 | 1 |
| 6. | ಕಲಬುರಗಿ ನಗರ | 0 | 0 | 0 |
| 7. | ಬೆಂಗಳೂರು ಜಿಲ್ಲೆ | 0 | 0 | 0 |
| 8. | ತುಮಕೂರು ಜಿಲ್ಲೆ | 3 | 1 | 1 |
| 9. | ಕೋಲಾರ ಜಿಲ್ಲೆ | 0 | 0 | 0 |
| 10. | ರಾಮನಗರ ಜಿಲ್ಲೆ | 0 | 0 | 2 |
| 11. | ಚಿಕ್ಕಬಳ್ಳಾಪುರ ಜಿಲ್ಲೆ | 0 | 0 | 0 |
| 12. | ಕೆ.ಜಿ.ಎಫ್. | 0 | 0 | 0 |
| 13. | ಮೈಸೂರು ಜಿಲ್ಲೆ | 0 | 1 | 1 |
| 14. | ಮಂಡ್ಯ ಜಿಲ್ಲೆ | 0 | 1 | 3 |
| 15. | ಹಾಸನ ಜಿಲ್ಲೆ | 0 | 0 | 0 |
| 16. | ಕೊಡಗು | 0 | 0 | 1 |
| 17. | ಚಾಮರಾಜನಗರ ಜಿಲ್ಲೆ | 1 | 0 | 0 |
| 18. | ಬೆಳಗಾವಿ ಜಿಲ್ಲೆ | 0 | 0 | 0 |
| 19. | ವಿಜಯಪುರ ಜಿಲ್ಲೆ | 0 | 0 | 1 |
| 20. | ಧಾರವಾಡ ಜಿಲ್ಲೆ | 0 | 1 | 0 |
| 21. | ಬಾಗಲಕೋಟೆ ಜಿಲ್ಲೆ | 0 | 0 | 0 |
| 22. | ಗದಗ ಜಿಲ್ಲೆ | 0 | 0 | 0 |
| 23. | ಚಿತ್ರದುರ್ಗ ಜಿಲ್ಲೆ | 0 | 0 | 0 |
| 24. | ಹಾವೇರಿ ಜಿಲ್ಲೆ | 0 | 1 | 1 |
| 25. | ಶಿವಮೊಗ್ಗ ಜಿಲ್ಲೆ | 0 | 1 | 1 |
| 26. | ದಾವಣಗೆರೆ ಜಿಲ್ಲೆ | 0 | 0 | 1 |
| 27. | ದಕ್ಷಿಣ ಕನ್ನಡ ಜಿಲ್ಲೆ | 0 | 0 | 0 |
| 28. | ಉತ್ತರ ಕನ್ನಡ ಜಿಲ್ಲೆ | 0 | 1 | 0 |
| 29. | ಚಿಕ್ಕಮಗಳೂರು ಜಿಲ್ಲೆ | 1 | 0 | 0 |
| 30. | ಉಡುಪಿ ಜಿಲ್ಲೆ | 0 | 0 | 0 |
| 31. | ಬಳ್ಳಾರಿ ಜಿಲ್ಲೆ | 0 | 0 | 0 |
| 32. | ಕಲಬುರಗಿ ಜಿಲ್ಲೆ | 0 | 0 | 0 |
| 33. | ಬೀದರ್ ಜಿಲ್ಲೆ | 0 | 0 | 0 |
| 34. | ರಾಯಚೂರು ಜಿಲ್ಲೆ | 0 | 0 | 0 |
| 35. | ಕೊಪ್ಪಳ ಜಿಲ್ಲೆ | 0 | 0 | 0 |
| 36. | ಯಾದಗಿರಿ ಜಿಲ್ಲೆ | 0 | 0 | 0 |
| 37. | ವಿಜಯನಗರ ಜಿಲ್ಲೆ | 0 | 0 | 1 |
| | ಒಟ್ಟು | 5 | 7 | 15 |